ಒ ಎಸ್ ನಂ.290/2012
ಡಿ.ಡಬ್ಲ್ಯೂ: 4 ಹಾಜರು

ದಿನಾಂಕಃ 14-01-2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಪಾಟೀ ಸವಾಲು ಶ್ರೀಯುತ ಎನ್ ಎಸ್ ಜಿವಕೀಲರಿಂದಃ
ಪ್ರತಿವಾದಿ ನಂ.1, 11 ರಿಂದ 14 ನೇ ಪ್ರತಿವಾದಿಗಳ ಪರವಾಗಿಃ

ನನ್ನ ಅಜ್ಜ ಮೊದಲನೆ ಪ್ರತಿವಾದಿಗೆ ಹಿರಿಯರಿಂದ ಬಂದಂತಹ ಯಾವುದೇ ಆಸ್ತಿ ಇಲ್ಲ ಎಂದರೆ ಸರಿ. ಆತನ ಹೆಸರಿನಲ್ಲಿದ್ದ ಆಸ್ತಿಗಳು ಆತನ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿ. ದಾವಾ ಐಟಮ ನಂ.5 ರಿಂದ 7 ಸೇರಿ ಪ್ರಶಾಂತ ಲಾಡ್ಜ ಇದೆ ಎಂದರೆ ಸರಿ. ದಾವಾ ಐಟಮ ನಂ.6 ಮತ್ತು 7 ನ್ನು ಮೊದಲನೆ ಪ್ರತಿವಾದಿ 1989 ರಲ್ಲಿ ಖರೀದಿಸಿದ್ದ ಎಂದರೆ ಸರಿ. ದಾವಾ ಐಟಮ ನಂ.5 ರಿಂದ ಯಾವುದೇ ಉತ್ಪನ್ನ ಇರಲಿಲ್ಲ ಎಂದರೆ ಸರಿ. ಮೊದಲನೆ ಪ್ರತಿವಾದಿಯ ಮಕ್ಕಳು ತಾವು ಮಾಡುವಂತಹ ವ್ಯವಹಾರಗಳನ್ನು ಬೇರೆ ಬೇರೆಯಾಗಿ ಮಾಡುತ್ತಾರೆ ಎಂದರೆ ಸರಿ. ಸದರಿ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಮಾಲನ್ನು ತರುವುದು ಅವರವರೆ ಮಾಡುತ್ತಾರೆ ಎಂದರೆ ಸರಿ. ಮೊದಲನೆ ಪ್ರತಿವಾದಿ 11 ನೇ ಪ್ರತಿವಾದಿಯೊಂದಿಗೆ ಸಿಂಡಿಕೇಟ ಬ್ಯಾಂಕನಲ್ಲಿ ಸಾಲ ಪಡೆದುಕೊಂಡು ಪ್ರಶಾಂತ ಲಾಡ್ಜ ಕಟ್ಟಿದ್ದರು ಎಂದರೆ ಸರಿ. ಸದರಿ ಲಾಡ್ಜಿನ ವ್ಯವಹಾರಗಳನ್ನು 11 ನೇ ಪ್ರತಿವಾದಿ ನೋಡುತ್ತಿದ್ದ ಎಂದರೆ ಸರಿ. ಮೊದಲನೆ ಪ್ರತಿವಾದಿ ಮತ್ತು ಆತನ ಮಕ್ಕಳ ನಡುವೆ ಏಕತ್ರ ಕುಟುಂಬ ಇರಲಿಲ್ಲ ಎಂದರೆ ಸರಿ.

ಮೊದಲನೆ ಪ್ರತಿವಾದಿಗೆ ಈಗ ವಯಸ್ಸಾಗಿದ್ದರಿಂದ ಸರಿಯಾಗಿ ಕಣ್ಣು ಕಾಣಿಸುವುದಿಲ್ಲ ಎಂದರೆ ಸರಿ. ಮೊದಲನೆ ಪ್ರತಿವಾದಿಗೆ ಪ್ರಶಾಂತ ಲಾಡ್ಜ ಇರುವ ಜಾಗೆಯನ್ನು 11 ನೇ ಪ್ರತಿವಾದಿಗೆ ಬಕ್ಸಿಸು ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ಸದರಿ ಬಕ್ಸಿಸು ಪತ್ರದ ಆದಾರದ ಮೇಲೆ 11 ನೇ ಪ್ರತಿವಾದಿಗೆ ತನ್ನ ಹೆಸರನ್ನು ಹಚ್ಚಿಸಿಕೊಂಡಿದ್ದಾನೆ ಎಂದರೆ ಸರಿ. ಮೊದಲನೆ ಪ್ರತಿವಾದಿಯ ಮಕ್ಕಳು ತಾವು ಮಾಡುತ್ತಿದ್ದ ವ್ಯವಹಾರದ ಆದಾಯದಿಂದ ಪ್ರತ್ಯೇಕವಾಗಿ ಆಸ್ತಿಗಳನ್ನು ಖರೀದಿಸಿದ್ದಾರೆ ಎಂದರೆ ಸರಿ. ಪ್ರಶಾಂತ ಲಾಡ್ಜ ಇರುವ ಜಗೆ ರಸ್ತೆ ಅಗಲೀಕರಣಕ್ಕಾಗಿ ಮುಂದಿನ ಅರ್ಧ ಭಾಗ ಸ್ವಾಧೀನ ಪಡಿಸಿಕೊಳ್ಳಲಾಗಿದೆ ಎಂದರೆ ಸರಿ. ಕಾರಣ ಅಲ್ಲಿ ಲಾಡ್ಜ ಮಾಡಲು ಜಾಗೆ ಸಾಕಾಗುತ್ತಿರಲಿಲ್ಲ ಎಂದರೆ ಸರಿ.

11 ನೇ ಪ್ರತಿವಾದಿ ಸುಮಾರು 1,30,00,000/- ಸಾಲ ಪಡೆದುಕೊಂಡು ಪ್ರಶಾಂತ ಲಾಡ್ಜನ ಉಳಿದ ಭಾಗವನ್ನು ಈಗ ನವೀಕರಿಸಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. 11 ನೇ ಪ್ರತಿವಾದಿ ಸದರಿ ಕಟ್ಟಡದಲ್ಲಿ ಈಗ ಶುಭಂ ಡ್ರೆಸಿಸ್ ಎಂಬ ವ್ಯವಹಾರ ಪ್ರಾರಂಬಿಸಿದ್ದಾರೆ ಎಂದರೆ ಸರಿ. ಮೊದಲನೆ ಪ್ರತಿವಾದಿಯ ಮಕ್ಕಳು ತಾವು ಖರೀದಿಸಿದ ಆಸ್ತಿಗೆ ಹೆಸರು ಹಚ್ಚಿಸಿಕೊಳ್ಳುವ ಕಾಲಕ್ಕೆ ಸದರಿ ಆಸ್ತಿಗಳು ಸ್ವಂತ ಆಸ್ತಿಗಳಾಗಿದ್ದರಿಂದ ಬೇರೆಯವರು ತಕರಾರು ಮಾಡಿಲ್ಲ ಎಂದರೆ ಸರಿ. ಸದರಿ ವ್ಯವಹಾರಗಳನ್ನು ಬಂಡವಾಳವನ್ನು ಮೊದಲನೆ ಪ್ರತಿವಾದಿಯ ಮಕ್ಕಳು ತಮ್ಮ ಸ್ವಂತ ನೆಲೆಯಿಂದ ಹಾಕಿದ್ದು ಅದರ ಲಾಭ ಮತ್ತು ನಷ್ಟಕ್ಕೆ ಅವರವರೆ ಜವಾಬ್ದಾರರು ಎಂದರೆ ಸರಿ. 11 ನೇ ಪ್ರತಿವಾದಿ ಪ್ರಶಾಂತ ಲಾಡ್ಜ ಇರುವ ಜಾಗೆಯಲ್ಲಿ ತನ್ನ ಹೆಂಡತಿ ಮತ್ತು ಮಕ್ಕಳ ಪಾಲುದಾರಿಕೆಯಲ್ಲಿ ಮೊಬೈಲ್ ವ್ಯವಹಾರ ಪ್ರಾರಂಬಿಸಿದ್ದಾರೆ ಎಂದರೆ ಸರಿ. 11 ನೇ ಪ್ರತಿವಾದಿಗೆ ಮಾಡುವ ವ್ಯವಹಾರದಲ್ಲಿ ಬೇರೆ ಯಾರಿಗೂ ಹಕ್ಕು ಇಲ್ಲ ಎಂದರೆ ಸರಿ.

<u>ಪಾಟೀ ಸವಾಲು ಶ್ರೀಯುತ ಬಿ ಕೆ ಜೆ ವಕೀಲರಿಂದಃ</u>

15 ರಿಂದ 17 ನೇ ಪ್ರತಿವಾದಿಗಳ ಪರವಾಗಿಃ-

15 ನೇ ಪ್ರತಿವಾದಿಯ ಗಂಡ ಬಸವರಾಜ ಗೋಕಾಕದಲ್ಲಿ ತೀರಿಕೊಂಡಿರುತ್ತಾರೆ. ನಾವು ಆತನ ಅಂತ್ಯಕ್ರೀಯೆಗೆ ಹೋಗಿದ್ದೇವು. ಎಮ್ ಬಿ ಬಿ ಎಸ್ ಪದವಿ 5 ವರೆ ವರ್ಷದ ಕೋರ್ಸ ಎಂದರೆ ನನಗೆ ಗೊತ್ತಿಲ್ಲ. 15 ನೇ ಪ್ರತಿವಾದಿಗೆ ನಾವು ನ್ಯಾಯಾಲಯದ ಆದೇಶದ ಪ್ರಕಾರ ಪೋಟಗಿ ನೀಡುತ್ತಿದ್ದೇವೆ . ಸದರಿ ವಿಷಯ ನನಗೆ ಗೊತ್ತು. ಮೊದಲನೆ ಪ್ರತಿವಾದಿಗೆ ಗೋಕಾಕಕ್ಕೆ ಉದ್ಯೋಗ ಮಾಡಲು ಬಂದಿದ್ದ ಎಂದರೆ ಸರಿ. ಆತ ಮೊದಲಿಗೆ ಚಹಾ ಮಾರಾಟ ಮಾಡುವ ಉದ್ಯೋಗ ಪ್ರಾರಂಬಿಸಿದ್ದ. ಸದರಿ ಉದ್ಯೋಗವನ್ನು ಹೊರತು ಪಡಿಸಿ ಆತ ಬೇರೆ ಉದ್ಯೋಗ ಮಾಡಿಲ್ಲ. ಮೃತ 2 ನೇ ಪ್ರತಿವಾದಿ ಮತ್ತು ಪ್ರತಿವಾದಿ ನಂ.1 ಮತ್ತು 3 ಒಟ್ಟಿಗೆ ಇದ್ದರು ಎಂದರೆ ಸರಿ. ಮೊದಲನೆ ಪ್ರತಿವಾದಿ ಗೋಕಾಕಕ್ಕೆ ಬಂದ ನಂತರ ಆತನಿಗೆ ಎಲ್ಲಾ ಮಕ್ಕಳು ಹುಟ್ಟಿರುತ್ತಾರೆ ಎಂದರೆ ಸರಿ. ಮೊದಲನೆ ಪ್ರತಿವಾದಿ ತನ್ನ ಮಕ್ಕಳಿಗೆ ಶಿಕ್ಷಣ ನೀಡಿ ಆತನೆ ಅವರ ಮದುವೆ ಮಾಡಿಸಿದ್ದಾನೆ ಎಂದರೆ ಹೌದು. ವಾಟ್ನಿಯಾಗುವಂತಹ ಯಾವುದೇ ಆಸ್ತಿಗಳು ಇರದೆ ಇದ್ದುದ್ದರಿಂದ ನಮ್ಮ ಕುಟುಂಬದಲ್ಲಿ ವಾಟ್ನಿಯಾಗಿಲ್ಲ.

ಪ್ರಶಾಂತ ಲಾಡ್ಜ ಇರುವ ಜಾಗೆಯಲ್ಲಿರುವ ಮನೆಯನ್ನು ಮೊದಲು ಮೊದಲನೆ ಪ್ರತಿವಾದಿ ಖರೀದಿಸಿದ್ದ. ಅಲ್ಲಿ 1981 ರಲ್ಲಿ ಪ್ರಶಾಂತ ಲಾಡ್ಜ ಪ್ರಾರಂಬಿಸಲಾಯಿತು. ಸದರಿ ಲಾಡ್ಜ 2015 ರವರೆಗೆ ಅಸ್ತಿತ್ವದಲ್ಲಿತ್ತು. ಅಲ್ಲಿ ಈಗ ಶುಭಂ ಎಂಬ ಶುದ್ಧ ಉಡುಪುಗಳ ಅಂಗಡಿ ಮತ್ತು ಮೊಬೈಲ್ ಅಂಗಡಿ ಪ್ರಾರಂಬಿಸಲಾಗಿರುತ್ತದೆ. ಸದರಿ ಎರಡೂ ವ್ಯವಹಾರಗಳನ್ನು 11 ನೇ ಪ್ರತಿವಾದಿ ನಡೆಸುತ್ತಾರೆ. ದೆಹಲಿ ಎಂಬ ಹೆಸರಿನಲ್ಲಿ ಅಡಿಯಲ್ಲಿ ಸುಮಾರು 8 ರಿಂದ 9 ವ್ಯವಹಾರಗಳು ಇರುತ್ತವೆ. ಸದರಿ ವ್ಯವಹಾರಗಳು ಮೊದಲನೆ ಪ್ರತಿವಾದಿಯ ಮಕ್ಕಳ ವೈಯಕ್ತಿಕ ಹೆಸರಿನಲ್ಲಿ ಇರುತ್ತವೆ.

ನಮ್ಮ ಕುಟುಂಬಕ್ಕೆ ನಲ್ಲಾನಟ್ಟಿಯಲ್ಲಿ ಜಮೀನು ಇತ್ತು. ಅದನ್ನು ಮಾರಾಟ ಮಾಡಲಾಗಿರುತ್ತದೆ. ಸದರಿ ಆಸ್ತಿಯನ್ನು ಮೊದಲನೆ ಪ್ರತಿವಾದಿ ಹಾಗೂ ಮೃತ 2 ನೇ ಪ್ರತಿವಾದಿ ಖರೀದಿಸಿದ್ದರು. ಮೊದಲನೆ ಪ್ರತಿವಾದಿಗೆ ವಯಸ್ಸಾದ ನಂತರ ಮನೆಯ ವ್ಯವಹಾರವನ್ನು ಮೃತ 2 ನೇ ಪ್ರತಿವಾದಿ ಮತ್ತು 3 ನೇ ಪ್ರತಿವಾದಿ ಮಾಡುತ್ತಿದ್ದರು. ನಲ್ಲಾನಟ್ಟಿಯಲ್ಲಿರುವ ಜಮೀನುಗಳಲ್ಲಿ ವಾದಿ ಮತ್ತು ಮೃತ 2 ನೇ ಪ್ರತಿವಾದಿ ಮಾರಾಟ ಮಾಡಿರುತ್ತಾರೆ. ದೆಹಲಿ ಎಂಬ ಹೆಸರಿನ ಅಡಿಯಲ್ಲಿರುವ 8 ರಿಂದ 9 ವ್ಯವಹಾರಗಳ ತೆರಿಗೆ ಮತ್ತು ಜಿ ಎಸ್ ಟಿ ಬೇರೆ ಬೇರೆಯಾಗಿವೆ ಎಂದರೆ ಸರಿ. ವ್ಯಾಪಾರದ ಉದ್ದೇಶಕ್ಕಾಗಿ ಹಾಗೆ ಅವುಗಳನ್ನು ಬೇರೆ ಬೇರೆಯಾಗಿ ಮಾಡಿಕೊಳ್ಳಲಾಗಿದೆ ಎಂದರೆ ಸರಿ. ಮೊದಲನೆ ಪ್ರತಿವಾದಿ 11 ನೇ ಪ್ರತಿವಾದಿಗೆ ಬಕ್ಸಿಸು ಮಾಡಿ ಕೊಟ್ಟಾಗ ಆತನಿಗೆ 45 ವರ್ಷ ಆಗಿತ್ತು.

ನಾನು ಪ್ರತಿವಾದಿಗಳು ಸಲ್ಲಿಸಿದ ಪ್ರತಿವಾದ ಪತ್ರವನ್ನು ಓದಿ ತಿಳಿದುಕೊಂಡಿಲ್ಲ. ಮೃತ ಬಸವರಾಜ ಜನತಾ ಕೊಲ್ಡಿಂಕ್ಸ ಮತ್ತು ಡೆಲ್ಲಿ ಅಪರೇಲ್ಸನಲ್ಲಿ ತಾಸಿನ ಮಟ್ಟಿಗೆ ಕೆಲಸ ಮಾಡುತ್ತಿದ್ದ. ಮೊದಲನೆ ಪ್ರತಿವಾದಿಯ ಎಲ್ಲಾ ಮಕ್ಕಳ ಉದ್ಯೋಗ ವ್ಯಾಪಾರ ಎಂದರೆ ಸರಿ. 6 ಮತ್ತು 18 ನೇ ಪ್ರತಿವಾದಿಗಳ ಮದುವೆ ಯಾವಾಗ ಆಯಿತು ಎಂಬುದು ನನಗೆ ಗೊತ್ತಿಲ್ಲ. ಅವರುಗಳ ಮದುವೆಗೆ ಯಾರು ಖರ್ಚು ಮಾಡಿದ್ದರು ಎಂಬುದು ನನಗೆ ಗೊತ್ತಿಲ್ಲ. ಕಾರಣ ನಾನು ಅವಾಗ ಬಹಳ ಚಿಕ್ಕವನು ಆಗಿದ್ದೆ. ನನಗೆ ಎಲ್ಲಾ ದೆಹಲಿ ಅಂಗ ಸಂಸ್ಥೆಗಳ ವೈವಾಟು ಎಷ್ಟು ಇದೆ ಎಂಬುದು ಗೊತಿಲ್ಲ. ನಾನು ಎರಡು ವ್ಯವಹಾರಗಳನ್ನು ಮಾತ್ರ ನೋಡಿಕೊಳ್ಳುತ್ತೇನೆ. ನಾನು ನೋಡಿಕೊಳ್ಳುತ್ತಿರುವ ದಿಲ್ಲಿ ಪ್ಯಾಶಾನ ಪ್ಲಾಜಾದ ವಾರ್ಷಿಕ ವೃವಾಟು 4 ವರೆ ಕೋಟಿ. ದಿಲ್ಲಿ ರೆಡಿಮೆಡ್ಸನ ಎರಡು ಶಾಖೆಯ ವೈವಾಟು 3 ವರೆ ಕೋಟಿ ರೂ.ಇರುತ್ತದೆ.

1962 ರಲ್ಲಿ ದಿಲ್ಲಿ ರೆಡಿಮೆಡ್ಸನ್ನು ಮೊದಲನೆ ಪ್ರತಿವಾದಿ ಪ್ರಾರಂಭಿಸಿದ್ದ ಎಂದರೆ ಸಾಕ್ಷಿ 3 ನೇ ಪ್ರತಿವಾದಿ ಎಂದು ನುಡಿದಿರುತ್ತಾರೆ. ಪ್ರತಿವಾದಿ ನಂ.1 ಮೃತ 2 ನೇ ಪ್ರತಿವಾದಿ ಮತ್ತು 3 ನೇ ಪ್ರತಿವಾದಿ ಬಟ್ಟೆ ವ್ಯಾಪಾರಕ್ಕಾಗಿ ಬೇರೆ ಊರಿಗೆ ಹೋಗುತ್ತಿದ್ದರು ಎಂದರೆ ಸಾಕ್ಷಿ ಮೊದಲನೆ ಪ್ರತಿವಾದಿಗೆ ಬಟ್ಟೆ ವ್ಯಾಪಾರದ ಬಗ್ಗೆ ಮಾಹಿತಿ ಇಲ್ಲವೆಂದು ನುಡಿದಿರುತ್ತಾರೆ . 15 ನೇ ಪ್ರತಿವಾದಿಯ ಗಂಡನ ಹೆಸರಿನಲ್ಲಿ ಎಲ್ ಐ ಸಿ ಪಾಲಿಸಿಗಳು ಇದ್ದವು ಎಂದರೆ ಸರಿ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿರುತ್ತದೆ. ಸದರಿ ಪಾಲಿಸಿಗಳನ್ನು ಮೃತ 2 ನೇ ಪ್ರತಿವಾದಿ ಮತ್ತು ವಾದಿಯ ಹೆಸರಿನಲ್ಲಿ ಜಂಟಿಯಾಗಿ ತೆಗೆದುಕೊಳ್ಳಲಾಗಿತ್ತು. ಮೃತ ಬಸವರಾಜನ ಹೆಸರಿನಲ್ಲಿ 1 ಪಾಲಿಸಿ ಇದ್ದದ್ದು ಅದು ಪೂರ್ಣಗೊಂಡ ನಂತರ ಅದರ ಹಣವನ್ನು ಪ್ರತಿವಾದಿ ನಂ.15 ಮತ್ತು 16 ಇವರ ಹೆಸರಿನಲ್ಲಿ ಜಂಟಿಯಾಗಿ ಇಡಲಾಗಿರುತ್ತದೆ. ನಾನು ಆ ಬಗ್ಗೆ ದಾಖಲಾತಿಗಳನ್ನು ಹಾಜರು ಮಾಡಿರುತ್ತೇವೆ. ಸದರಿ ಪಾಲಿಸಿಗಳು ಬೇರೆ ಬೇರೆ ಹೆಸರಿನಲ್ಲಿಯೂ ಸಹ ಇರುತ್ತವೆ. ಸದರಿ ಪಾಲಿಸಿಗಳ ಹಣವನ್ನು ಸಂಬಂಧಪಟ್ಟವರು ಯಾವ ಯಾವ ವ್ಯವಹಾರಗಳನ್ನು ನೋಡುತ್ತಿದ್ದಾರೋ ಆ ವ್ಯವಹಾರಗಳ ಅಂಗಡಿಯಿಂದ ಹಣ ಕಟ್ಟುತ್ತಾರೆ ಎಂದರೆ ಸರಿ. ನಮ್ಮ ಎಲ್ಲಾ ಪಡಿತರ ಚೀಟಿಗಳು ಬೇರೆ ಬೇರೆ ಇವೆ ಎಂದರೆ ಸರಿ.

ಮೊದಲನೆ ಪ್ರತಿವಾದಿ ಈಗ 11 ನೇ ಪ್ರತಿವಾದಿಯ ಮನೆಯಲ್ಲಿ ಇರುತ್ತಾರೆ. ನನ್ನ ಮತ್ತು ಮೊದಲನೆ ಪ್ರತಿವಾದಿಯ ನಡುವೆ ಸಂಬಂಧ ಚೆನ್ನಾಗಿರುತ್ತದೆ. ಮೊದಲನೆ ಪ್ರತಿವಾದಿಗೆ ನ್ಯಾಯಾಲಯಕ್ಕೆ ಬರಲಾಗುವುದಿಲ್ಲ ಕಾರಣ ಆತನ ಸಾಕ್ಷ್ಯ ಮಾಡಿಸಲಾಗುವುದಿಲ್ಲ. 17 ನೇ ಪ್ರತಿವಾದಿ ಸ್ವಲ್ಪ ಮಟ್ಟಿಗೆ ಮಾನಸಿಕ ಅಸ್ತವ್ಯಸ್ತನಾಗಿದ್ದಾನೆ ಎಂದರೆ ಸರಿಯಲ್ಲ. ಮೃತ ಬಸವರಾಜ ತೀರಿಕೊಂಡ ನಂತರ ಆತನ ಹೆಂಡತಿ ಮಕ್ಕಳಿಗೆ ನಾನು ನನ್ನ ಕಾಕಂದಿರು ಯಾವುದೇ ಹಣ ನೀಡಿಲ್ಲ ಎಂದರೆ ಸಾಕ್ಷಿ 16 ನೇ ಪ್ರತಿವಾದಿಗೆ ಎಮ್ ಬಿ ಬಿ ಎಸ್ ಕಲಿಯಲು ಹಣ ನೀಡಿದ್ದೇವೆಂದು ನುಡಿದಿರುತ್ತಾರೆ. 16 ನೇ ಪ್ರತಿವಾದಿ ಯಾವ ವರ್ಷದಿಂದ ಯಾವ ವರ್ಷದವರೆಗೆ ಯಾವ ಕಾಲೇಜಿನಲ್ಲಿ ಮೆಡಿಕಲ್ ಕಲಿತಿದ್ದಾಳೆ ಎಂಬುದು ನನಗೆ ಗೊತ್ತಿಲ್ಲ. ಆಕೆ ಈಗ ತಿರುಪತಿಯಲ್ಲಿ ನೌಕರಿ ಮಾಡುತ್ತಾಳೆ. 16 ನೇ ಪ್ರತಿವಾದಿಯ ವಿದ್ಯಾಭ್ಯಾಸಕ್ಕಾಗಿ ನಾವು ಹಣ ನೀಡಿದ ಬಗ್ಗೆ ಯಾವುದೇ ದಾಖಲಾತಿ ಇಲ್ಲ.

ಮೃತ ಬಸವರಾಜ ಎಲ್ಲಾ ವ್ಯವಹಾರ ಮತ್ತು ಅಂಗಡಿಗಳಲ್ಲಿ ನನ್ನ ಕಾಕಂದಿರ ಮತ್ತು ನನ್ನ ತಂದೆಯಷ್ಟೆ ಕೆಲಸ ಮಾಡುತ್ತಿದ್ದ ಎಂದರೆ ಸರಿಯಲ್ಲ. 15 ರಿಂದ 17 ನೇ ಪ್ರತಿವಾದಿಗಳಿಗೆ ಪಾಲನ್ನು ತಪ್ಪಿಸುವ ಉದ್ದೇಶದಿಂದ ನಾನು ಹಾಗೆ ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. 15 ಮತ್ತು 16 ನೇ ಪ್ರತಿವಾದಿಯ ಹೆಸರಿನಲ್ಲಿ ಜಂಟಿಯಾಗಿ 30 ರಿಂದ 35 ಲಕ್ಷ ರೂ.ಗಳನ್ನು ಠೇವಣಿಯನ್ನಾಗಿ ಬ್ಯಾಂಕಿನಲ್ಲಿ ಇಡಲಾಗಿದೆ. ಸದರಿ ಠೇವಣಿಯನ್ನು ಅಂಚೇ ಇಲಾಖೆಯಲ್ಲಿ ಇಡಲಾಗಿರುತ್ತದೆ. ಸದರಿ ಹಣವನ್ನು ಎಲ್ಲಾ ವ್ಯವಹಾರಗಳ ಹಣದಿಂದ ಠೇವಣಿಯನ್ನಾಗಿ ಇಡಲಾಗಿರುತ್ತದೆ. ಸದರಿ 35 ಲಕ್ಷ ರೂ.ಗಳನ್ನು 15 ಮತ್ತು 16 ನೇ ಪ್ರತಿವಾದಿಗಳಿಗೆ ಆಸ್ತಿಗಳಲ್ಲಿ ಪಾಲನ್ನಾಗಿ ನೀಡಿಲ್ಲ. ಸಾಕ್ಷಿ ಮುಂದುವರೆದು ಮೃತ ಬಸವರಾಜನ ಹೆಸನರಿಲ್ಲಿದ್ದಂತಹ ಪಾಲಿಸಿ ಹಣ ಮುಕ್ತಾಯವಾದ ನಂತರ ಅದನ್ನು ಠೇವಣಿಯಿನ್ನಾಗಿ ಇಡಲಾಗಿದೆ ಎಂದು ನುಡಿದಿರುತ್ತಾರೆ.

15 ನೇ ಪ್ರತಿವಾದಿ ಚಿತ್ರಾ ಟಾಕೀಸ್ ಎದುರುಗಡೆ ಇರುವ ಹಳೆ ಮನೆಯಲ್ಲಿ ಎಲ್ಲರೊಂದಿಗೆ ಒಟ್ಟಿಗೆ ಇರುತ್ತಾರೆ. ಆಕೆ ಸದರಿ ಮನೆಯನ್ನು ಹೊರತು ಪಡಿಸಿ ಬೇರೆ ಎಲ್ಲಿಯೂ ಇರುವುದಿಲ್ಲ. ಸದರಿ ಮನೆಯಲ್ಲಿ ರಾಮಚಂದ್ರ ಸುರೇಶ, ವಿಠ್ಠಲ ತಮ್ಮ ಕುಟುಂಬದೊಂದಿಗೆ ವಾಸ ಮಾಡಿಕೊಂಡಿರುತ್ತಾರೆ. 15 ರಿಂದ 17 ನೇ ಪ್ರತಿವಾದಿಗಳಿಗೆ ಪಾಲನ್ನು ತಪ್ಪಿಸುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಪಾಲು ಆಗದೇ ಇದ್ದರೂ 15 ರಿಂದ 17 ನೇ ಪ್ರತಿವಾದಿಗೆ ಪಾಲು ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ಪಾಲು ಆಗುವಂತಹ ಯಾವುದೇ ಆಸ್ತಿಗಳು ಇರುವುದಿಲ್ಲವೆಂದು ನುಡಿದಿರುತ್ತಾರೆ. ನಾನು ಹಾಜರು ಮಾಡಿದ ದಾಖಲಾತಿಗಳು ವ್ಯಾಪಾರದ ದೃಷ್ಟಿಯಿಂದ ವೈಯಕ್ತಿಕ ಹೆಸರಿನಲ್ಲಿರುತ್ತವೆ ಎಂದರೆ ಸರಿ.

18 ನೇ ಪ್ರತಿವಾದಿಯ ಪರ ವಕೀಲರು ಮೇಲೆ ಹೇಳಿದ ಪಾಟೀ ಸವಾಲನ್ನು ತಮ್ಮ ಪರವಾಗಿ ಅಳವಡಿಸಿಕೊಂಡಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ.

(ಸತೀಶ ಜೆ.ಬಾಳಿ)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ